**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.28.10.2025**

**ಮುಂದುವರಿದ ಪಾಟಿ ಸವಾಲುಃ 4 ನೇ (ಎ) ಮತ್ತು (ಸಿ) ಪ್ರತಿವಾದಿಗಳ ಪರ ಶ್ರೀ.ಎಂ ಸಿ ಎಸ್ ವಕೀಲರಿಂದಃ**

6. ನಿಪಿ-34 ದಾಖಲೆಯಂತೆ ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಭಾಗ ನೀಡಿರುವುದಿಲ್ಲ, ಬದಲಾಗಿ ಬೇರೆ ಸರ್ವೆ ನಂಬರ್ ಗಳಲ್ಲಿ ಭಾಗ ನೀಡಿದ್ದಾರೆ ಎಂದರೆ ಸರಿ. ನಾನು ವಾದ ಪತ್ರದಲ್ಲಿ ಕೇಳಿರುವಂತೆ ಸರ್ವೆ ನಂ.31/1 ರಲ್ಲಿ ಮತ್ತು 31/2 ರಲ್ಲಿ ನನಗೆ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನಮ್ಮ ನಡುವೆ ವಿಭಾಗ ಆಗುವ ಮೊದಲು ದಾವಾ ಆಸ್ತಿಗಳನ್ನು ಹೊರತು ಪಡಿಸಿ ಬಾಲೇಪುರ ಗ್ರಾಮದ ಬೇರೆ ಸರ್ವೆ ನಂಬರ್ ಗಳಲ್ಲಿ ನಮಗೆ ಬೇರೆ ಆಸ್ತಿಗಳು ಇದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಬಾಲೇಪುರ ಗ್ರಾಮದ ಸರ್ವೆ ನಂ.2/16(ಎ) ರಲ್ಲಿ 7 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ ಅದು ಮನೆ ಕಟ್ಟುವ ಜಾಗ ಇದೆ ಎಂದು ನುಡಿಯುತ್ತಾರೆ. ಬಾಲೇಪುರ ಗ್ರಾಮ ಬಿಟ್ಟು ನಲ್ಲೂರು ಗ್ರಾಮದಲ್ಲೂ ನಮ್ಮ ಕುಟುಂಬಕ್ಕೆ ಆಸ್ತಿಗಳು ಇದ್ದವು. 1988 ನೇ ಸಾಲಿನಲ್ಲಿ ನಮ್ಮ ಕುಟುಂಬದಲ್ಲಿ ಆದ ಎಲ್ಲಾ ಸರ್ವೆ ನಂಬರ್ ಗಳ ಬಾಬತ್ತು ವಿಭಾಗವನ್ನು ರದ್ದು ಮಾಡದ ಹೊರತು ದಾವಾ ಸ್ವತ್ತುಗಳಲ್ಲಿಯೇ ವಿಭಾಗ ಕೇಳಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1988 ನೇ ಸಾಲಿನಲ್ಲಿ ಆದ ವಿಭಾಗದಂತೆ 1992-93 ನೇ ಸಾಲಿನಲ್ಲಿ ಎಲ್ಲಾ ಆಸ್ತಿಗಳ ಖಾತೆ ಬದಲಾವಣೆ ಆಗಿದ್ದು, ನನ್ನ ಪಾಲಿಗೆ ಬಂದ ಆಸ್ತಿಯ ಖಾತೆ ಸಹ ನನ್ನ ಹೆಸರಿಗೆ ಆಗಿದ್ದು, ಅದು ನನಗೂ ಗೊತ್ತಿದೆ ಎಂದರೆ ಸರಿ.

7. 1988 ನೇ ಸಾಲಿನಲ್ಲಿ ಆದ ವಿಭಾಗದ ಬಗ್ಗೆ 2016 ನೇ ಸಾಲಿನಲ್ಲಿ ಪ್ರಶ್ನೆ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ 2016 ನೇ ಸಾಲಿನಲ್ಲಿ ನನಗೆ 10 ಗುಂಟೆ ಜಮೀನು ಬೇರೆಯವರಿಗೆ ಮಾರಾಟ ಆಗಿರುವ ವಿಚಾರ ಗೊತ್ತಾಯಿತು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ಭಾಗಕ್ಕೆ ಬಿಟ್ಟಿದ್ದ ಆಸ್ತಿಯನ್ನು ಅವರುಗಳು ತೀರಿಕೊಂಡ ನಂತರ ನನ್ನ ಪಾಲಿಗೆ ನೀಡಿ ಸರಿದೂಗಿಸಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೊರತು ಪಡಿಸಿ ನನ್ನ ಅಣ್ಣ ತಮ್ಮಂದಿರ ವಿರುದ್ದ ಬೇರೆ ದಾವೆಯನ್ನು ಸಲ್ಲಿಸಿದ್ದೇನೆ. ಸದರಿ ದಾವೆಯನ್ನು ನಾನು ಭಾಗಂಶ ಬರಬೇಕೆಂದು ಸಲ್ಲಿಸಿರುತ್ತೇನೆ. 2016 ನೇ ಸಾಲಿಗೆ ದಾವಾ ಆಸ್ತಿಯ ಮೌಲ್ಯ ಎಷ್ಟು ಆಗುತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಈಗ ದಾವಾ ಆಸ್ತಿಯ ಮೌಲ್ಯ ಎಷ್ಟು ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. 2016 ನೇ ಸಾಲಿಗೆ ದಾವಾ ಆಸ್ತಿಯ ಮೌಲ್ಯ 1 ಗುಂಟೆಗೆ ಕನಿಷ್ಟ 1 ಲಕ್ಷ ರೂಗಳು ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾ ಸ್ವತ್ತಿನ ಮೌಲ್ಯ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೌಲ್ಯ

ಸರಿಯಾಗಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಕೇಳಿರುವ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ದಾವೆ ಕ್ರಮಬದ್ದವಾಗಿರುವುದಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.19.08.2025**

**ಪಾಟಿ ಸವಾಲುಃ 4 ನೇ (ಎ) ಮತ್ತು (ಸಿ) ಪ್ರತಿವಾದಿಗಳ ಪರ ಶ್ರೀ.ಎಂ ಸಿ ಎಸ್ ವಕೀಲರಿಂದಃ**

1. ನಮ್ಮ ತಂದೆ ತಮ್ಮೇಗೌಡ ರವರಿಗೆ 5 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು. ದಿಃ11.12.1988 ರಂದು ನಮ್ಮ ತಂದೆ ಮತ್ತು ಗಂಡು ಮಕ್ಕಳ ನಡುವೆ ವಿಭಾಗ ಆಗಿದೆ ಎಂದರೆ ಸರಿ. ಸದರಿ ವಿಭಾಗ ಪತ್ರದಂತೆ ಎ ಷೆಡ್ಯೂಲ್ ಆಸ್ತಿ ನಮ್ಮ ತಂದೆಗೆ ಮತ್ತು ಎಫ್ ಷೆಡ್ಯೂಲ್ ಆಸ್ತಿ ನನ್ನ ಭಾಗಕ್ಕೆ ಬಂದಿದೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಅದಾಗಲೇ ಮಾರಾಟ ಮಾಡಿದ್ದ 10 ಗುಂಟೆ ಜಮೀನನ್ನು ಸೇರಿಸಿ ನನ್ನ ಪಾಲಿಗೆ ಬರೆದಿದ್ದು, ಸದರಿ 10 ಗುಂಟೆ ಜಮೀನನ್ನು ನನ್ನ ಸಹೋದರರ ಬೇರೆ ಆಸ್ತಿಯಿಂದ ನನಗೆ ಕೊಡಿಸಿಕೊಡುವಂತೆ ಈ ದಾವೆಯನ್ನು ಹೂಡಿರುತ್ತೇನೆ. ದಿಃ11.12.1988 ರ ವಿಭಾಗ ಪತ್ರವನ್ನು ಮರು ಪರಿಷ್ಕರಣೆ ಮಾಡುವಂತೆ ನಾನು ಈ ದಾವೆಯಲ್ಲಿ ಕೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಲ್ಲಿ ಇರುವ ಎಲ್ಲಾ ಪಕ್ಷಗಾರರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುತ್ತೇನೆ. ಸದರಿ ವಿಭಾಗ ಪತ್ರದಂತೆ ಸರ್ವೆ ನಂ.28/1 ರಲ್ಲಿ 27 ಗುಂಟೆ ಜಮೀನು ನನ್ನ ಪಾಲಿಗೆ ಬಂದಿದ್ದು, 27 ಗುಂಟೆ ಜಮೀನು ನನ್ನ ಹೆಸರಿಗೆ ಖಾತೆ ಆಗಿರುತ್ತದೆ.

2. ಸಾಕ್ಷಿಗೆ ಈಗ ಒಂದು ಪಹಣಿಯನ್ನು ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಂತೆ ನನ್ನ ಹೆಸರಿನಲ್ಲಿ ಸರ್ವೆ ನಂ.28/1 ರಲ್ಲಿ 30 ಗುಂಟೆ ಜಮೀನು ಖಾತೆ ಆಗಿದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ವಿಭಾಗ ಪತ್ರ ಆದಾಗ ಸರ್ವೆ ನಂ.28/1 ರಲ್ಲಿ 27 ಗುಂಟೆ ಜಮೀನು ಮಾತ್ರ ಖಾತೆ ಇದ್ದು 2022 ನೇ ಸಾಲಿನಲ್ಲಿ ಎ ಸಿ ನ್ಯಾಯಾಲಯದಲ್ಲಿ ನಾನು ಪ್ರಕರಣ ಹೂಡಿ ಸದರಿ ವಿಸ್ತೀರ್ಣವನ್ನು 30 ಗುಂಟೆ ಎಂಬುದಾಗಿ ತಿದ್ದುಪಡಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ತಿದ್ದುಪಡಿ ಆದ ಬಗ್ಗೆ ನ್ಯಾಯಾಲಯಕ್ಕೆ ವರದಿ ಮಾಡಿರುವುದಿಲ್ಲ. ಸರ್ವೆ ನಂ.28/1 ಕ್ಕೆ ಸಂಬಂದಿಸಿದಂತೆ ಯಾವುದೇ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-34 ವಿಭಾಗ ಪತ್ರಕ್ಕೆ ಸಂಬಂದಿಸಿ ಸದರಿ ವಿಭಾಗ ಪತ್ರದಲ್ಲಿ ಪ್ರತಿಯೊಬ್ಬ ಹಿಸ್ಸೆದಾರರ ಷೆಡ್ಯೂಲ್ ಕೆಳಗೆ ಷರ ಬರೆದಿದೆ ಎಂದರೆ ಸರಿ. ಸದರಿ ಷರದಲ್ಲಿ ಏನು ಬರೆದಿದೆ ಎಂಬುದನ್ನು ನಾು ತಿಳಿದುಕೊಂಡಿರುವುದಿಲ್ಲ.

3. ಸರ್ವೆ ನಂ.28/1 ರಲ್ಲಿ ನನಗೆ 3 ಗುಂಟೆ ಹೆಚ್ಚುವರಿ ಆಗಿ ಬಂದಿದೆ ಎಂದರೆ ಸಾಕ್ಷಿ ಅದಕ್ಕೆ ನಾನು ಸುಮಾರು ವರ್ಷಗಳ ಕಾಲ ರೆವಿನ್ಯೂ ಕಚೇರಿಗಳಿಗೆ ಅಲೆದಾಡಿ ಮಾಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್ ನಲ್ಲಿ 3 ಗುಂಟೆ ವಿಸ್ತೀರ್ಣ ತಿದ್ದುಪಡಿ ಆದ ಬಗ್ಗೆ ಈ ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನಮ್ಮ ತಂದೆಯವರು 1999 ನೇ ಸಾಲಿನಲ್ಲಿ ನಿಧನರಾಗಿರುತ್ತಾರೆ. ನಮ್ಮ ತಾಯಿ ರವರು 2007 ನೇ ಸಾಲಿನಲ್ಲಿ ನಿಧನರಾಗಿರುತ್ತಾರೆ. ವಿಭಾಗ ಪತ್ರದಲ್ಲಿ ನಮ್ಮ ತಂದೆಯವರ ಪಾಲಿಗೆ ತೋರಿಸಿರುವ

ಆಸ್ತಿಗಳು ಅವರ ಜೀವಿತ ಕಾಲದಲ್ಲಿ ಅವರೇ ಅನುಭವಿಸುವಂತೆ, ಅವರ ಮರಣ ನಂತರ ನಮ್ಮ ತಾಯಿಯವರು ಅನುಭವಿಸುವಂತೆ, ನಮ್ಮ ತಾಯಿಯ ಮರಣ ನಂತರ ಸದರಿ ಆಸ್ತಿಗಳು ನಮ್ಮ ತಂದೆಯ ಎಲ್ಲಾ ಮಕ್ಕಳಿಗೂ ಸೇರಬೇಕು ಎಂಬುದಾಗಿ ವಿಭಾಗ ಪತ್ರದಲ್ಲಿ ಷರ ಬರೆದಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದ ಪತ್ರದ ಜೊತೆ ಹಾಜರು ಮಾಡಿರುವ ಸಂಪೂರ್ಣ ವಿಭಾಗ ಪಟ್ಟಿಯ ನಕಲು ಪ್ರತಿಯನ್ನು ತೋರಿಸಿ ಓದಿ ಹೇಳುವಂತೆ ಕೇಳಿದಾಗ ಸಾಕ್ಷಿ ತನಗೆ ಸಣ್ಣ ಅಕ್ಷರಗಳು ಕಾಣುವುದಿಲ್ಲ ಎಂದು ನುಡಿಯುತ್ತಾರೆ.

4. ನಾನು 12 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವಿಭಾಗ ಪತ್ರವನ್ನು ತಯಾರು ಮಾಡುವಾಗ ನಾನೇ ನಿಂತು ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿ ಮರಣದ ನಂತರ ನಮ್ಮ ತಂದೆಯ ಭಾಗಕ್ಕೆ ವಿಭಗ ಪತ್ರದಲ್ಲಿ ಬರೆದಿದ್ದ ಆಸ್ತಿಗಳನ್ನು ನನ್ನ ಅಣ್ಣ ಮುನಿಸೊಣ್ಣೇಗೌಡ ರವರು ನಮ್ಮ ತಂದೆಯ 7 ಜನ ಮಕ್ಕಳಿಗೂ ದಾನ ಪತ್ರದಂತೆ ಬರೆದುಕೊಟ್ಟಿರುತ್ತ್ತೆ. ಅದರಂತೆ ನಮ್ಮ ತಂದೆ ಪಾಲಿಗೆ ಬರೆದಿದ್ದ ಸರ್ವೆ ನಂ.6/4 ರಲ್ಲಿ 2 ಎಕರೆ 16 ಗುಂಟೆ ಪೈಕಿ ನನಗೆ 24 ಗುಂಟೆ ಜಮೀನು, ನನ್ನ ಅಣ್ಣ ಜಯರಾಮಯ್ಯ ರವರಿಗೆ 17 ಗುಂಟೆ ಜಮೀನು, ಮುನಿಸೊಣ್ಣಮ್ಮ ರವರಿಗೆ 10 ಗುಂಟೆ ಜಮೀನು ಜಯಮ್ಮ ರವರಿಗೆ 10 ಗುಂಟೆ ಜಮೀನು, ಮುನಿಸೊಣ್ಣೇಗೌಡ ರವರಿಗೆ 15 ಗುಂಟೆ ಜಮೀನು, ಮುನಿಕೃಷ್ಣಪ್ಪ ರವರಿಗೆ 10 ಗುಂಟೆ ಜಮೀನು, ಸುಶೀಲಮ್ಮ ರವರಿಗೆ 10 ಗುಂಟೆ ಜಮೀನು ಬಂದಿರುತ್ತದೆ. ಮುನಿಸೊಣ್ಣೇಗೌಡ ರವರಿಗೆ 13 ಗುಂಟೆ ಜಮೀನು ಮಾತ್ರ ಬಂದಿರುತ್ತದೆ ಎಂದರೆ ಸಾಕ್ಷಿ ಮುನಿಸೊಣ್ಣೇಗೌಡ ರವರು ತನಗೆ 15 ಗುಂಟೆ ಬಂದಿರುವುದಾಗಿ ತಿಳಿಸಿದರು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಪರೀಶಿಲನೆ ಮಾಡಿರುವುದಿಲ್ಲ. ಮುನಿಸೊಣ್ಣೇಗೌಡ ರವರಿಗೆ 13 ಗುಂಟೆ ಜಮೀನು ಮಾತ್ರ ಬಂದಿದ್ದು, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸರ್ವೆ ನಂ.6/4 ರಲ್ಲಿ ನಿಮಗೆ ಮಾತ್ರ 24 ಗುಂಟೆ ಜಮೀನು ಏಕೆ ಕೊಟ್ಟರು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ತಾಯಿಯನ್ನು 1995 ರಿಂದ ಅವರು ತೀರಿಕೊಳ್ಳುವ ವರೆಗೆ ನಾನೇ ನೋಡಿಕೊಂಡಿದ್ದು, ಅವರ ಅಂತ್ಯಕ್ರಿಯೆಯ ಜವಬ್ದಾರಿಯನ್ನು ನಾನೇ ಮಾಡಿದ್ದು, ಆ ಕಾರಣದಿಂದ ನನಗೆ 24 ಗುಂಟೆ ಜಮೀನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಯನ್ನು ನಾನು ನೋಡಿ ಕೊಂಡ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಮಾಡಲು ಆಗುವುದಿಲ್ಲ. ನಮ್ಮ ತಂದೆ ತಾಯಿಯನ್ನು ಅವರ ಜೀವಿತ ಕಾಲದಲ್ಲಿ ನಾನು ನೋಡಿಕೊಂಡಿರುವುದಿಲ್ಲ, ಬದಲಾಗಿ ಮುನಿಸೊಣ್ಣೇಗೌಡ ರವರು ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ನನಗೆ 7 ಗುಂಟೆ ಜಮೀನು ಕಡಿಮೆ ಇದ್ದುದರಿಂದ ನಮ್ಮ ತಂದೆಯ ಪಾಲಿನ ಆಸ್ತಿಯನ್ನು ಭಾಗ ಮಾಡಿಕೊಳ್ಳುವಾಗ ನನಗೆ 14 ಗುಂಟೆ ಜಮಿನನ್ನು ಹೆಚ್ಚುವರಿಯಾಗಿ ನೀಡಿದ್ದಾರೆ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ನೀಡಿದ್ದ ಆಸ್ತಿಯಲ್ಲಿ ಜಯರಾಮೇಗೌಡ ರವರಿಗೆ ನೀಡಿದ್ದ ಆಸ್ತಿಯಲ್ಲಿ 7 ಗುಂಟೆ ಜಮೀನು ರಸ್ತೆಗೆ ಒತ್ತುವರಿಯಾದ್ದರಿಂದ ಅದನ್ನು ಸರಿ ಮಾಡಲು ಅವರಿಗೆ 7 ಗುಂಟೆ ಆಸ್ತಿಯನ್ನು ಹೆಚ್ಚಿಗೆ

ನೀಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಮರಣದ ನಂತರ ನಮ್ಮ ತಂದೆಯ ಪಾಲಿಗೆ ನೀಡಿದ್ದ ಆಸ್ತಿಯ ವಿಚಾರವಾಗಿ ನಾನು ಮತ್ತು ನನ್ನ ಸಹೋದರರು ದಿಃ03.04.2007 ರಂದು ಒಂದು ಪ್ರತ್ಯೇಕ ವಿಭಾಗ ಪತ್ರವನ್ನು ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ವಿಭಾಗ ಪತ್ರ ಬರೆದುಕೊಂಡಿದ್ದು, ಅದಕ್ಕೆ ನಾನು ಸಹಿ ಹಾಕದೇ ನನಗೆ ದಾನವಾಗಿ ಬರೆದುಕೊಡುವಂತೆ ಒತ್ತಾಯ ಮಾಡಿ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ಕೋರಿಕೆಯ ಮೇರೆಗೆ ಮುಂದುವರಿದ ಪಾಟಿ ಸವಾಲಿಗೆ ಸಮಯ ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**